ಕೆ. ನಂದಿನಿ ಶ್ರೀನಿವಾಸ
ಸದಸ್ಯರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
BRUHAT BENGALURU MAHANAGARA PALIKE
ವಿದ್ಯಾರಣ್ಯಪುರ – ವಾರ್ಡ ನಂ. 9

ನಂ. 1, ಶ್ರೀ ಲಕ್ಷ್ಮಿ ಕಾಂಪ್ಲೆಕ್ಸ್,
ನಂಜಪ್ಪ ಸರ್ಕಲ್, ವಿದ್ಯಾರಣ್ಯಪುರ ಅಂಚೆ,
ಬೆಂಗಳೂರು – 560 097.

ದೂರವಾಣಿ : 92431 00694
92434 30694

ಉಲ್ಲೇಖ : 148/11-12

ದಿನಾಂಕ : 27/8/11

ರವರಿಗೆ,

ಮಾನ್ಯ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಮಾನ್ಯರೇ,

ವಿಷಯ: ವಾರ್ಡ್ ನಂ. 09ರಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೃತ್ತವನ್ನು ಅಭಿವೃದ್ಧಿಗೊಳಿಸುವ ಬಗ್ಗೆ.

* * * * * *

ತಮಗೆ ಈ ಮೂಲಕ ತಿಳಿಯಪಡಿಸುವುದೆನೆಂದರೆ ವಾರ್ಡ್ ನಂ. 09ರ ಸರಹದ್ದಿನಲ್ಲಿರುವ ದೊಡ್ಡಬೊಮ್ಮಸಂದ್ರ, ಕೆರೆಯ ವ್ಯಾಪ್ತಿಗೆ ಸೇರಿದ ಜಾಗದಲ್ಲಿ ಕೆಲವರು ಒತ್ತುವರಿಗೊಳಿಸಿದ್ದು, ಈ ಒತ್ತುವರಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೆರೆ ಅಭಿವೃದ್ಧಿ ವಿಭಾಗ ರವರು ಅರಣ್ಯ ವಿಭಾಗದ ಸಹಯೋಗದಿಂದ ಈ ಒತ್ತವರಿ ಜಾಗವನ್ನು ದಿನಾಂಕ: 10.08.2011 ರಂದು ತೆರವುಗೊಳಿಸಲಾಗಿರುತ್ತದೆ. ಈ ಒತ್ತುವರಿ ಜಾಗವು ಮುಖ್ಯರಸ್ತೆಗೆ ಹೊಂದಿಕೊಂಡಿದ್ದು, ಹಾಗೂ ನಂಜಪ್ಪ ವೃತ್ತದಲ್ಲಿರುತ್ತದೆ. ದೊಡ್ಡಬೊಮ್ಮಸಂದ್ರ ಕೆರೆಯ ಬೌಂಡರಿಯನ್ನು ಈಗಾಗಲೇ ಚೈನ್‌ಲಿಂಗ್ ಫೆನ್ಸಿಂಗ್ ಮಾಡಿದ್ದು, ಈಗ ತೆರವುಗೊಳಿಸಿರುವ ಜಾಗವು ರಸ್ತೆಯ ಬದಿಗಳಲ್ಲಿರುತ್ತದೆ. ಈ ರಸ್ತೆಯಲ್ಲಿ ವಾಹನ ಸಂಚಾರವು ಅಧಿಕವಾಗಿದ್ದು, ರಸ್ತೆಯ ಅಗಲೀಕರಣವಾಗುವುದು ಅವಶ್ಯಕವಾಗಿರುತ್ತದೆ. ಹಾಲಿ ತೆರವುಗೊಳಿಸಿರುವ ಜಾಗ ರಸ್ತೆಗೆಹೊಂದಿಕೊಂಡಿದ್ದು, ಕೆರೆಗೆ ಬಹಳಷ್ಟು ದೂರದಲ್ಲರುತ್ತದೆ. ಈ ಜಾಗವನ್ನು ಪುನಃ ಸಾರ್ವಜನಿಕರು ಒತ್ತುವರಿ ಮಾಡುವ ಹಾಗೂ ಈ ಸ್ಥಳವನ್ನು ದುರುಪಯೋಗಪಡಿಸಿಕೊಳುವ ಸಾದ್ಯತೆ ಇರುವುದರಿಂದ ಈಗ ತೆರವುಗೊಳಿಸಿ ಜಾಗವನ್ನು ಸೇರಿಸಿಕೊಂಡು ನಂಜಪ್ಪ ವೃತ್ತವನ್ನು ಅಭಿವೃದ್ಧಿಗೊಳಿಸುವುದು ಸೂಕ್ತವಾಗಿರುವುದು ಕಂಡುಬಂದಿರುತ್ತದೆ. ಈ ನಂಜಪ್ಪ ವೃತ್ತ ಅಭಿವೃದ್ಧಿಗೊಳಿಸಿದ್ದಲ್ಲಿ ಆ ಪ್ರದೇಶದ ನಿವಾಸಿಗಳಿಗೆ, ಸಾರ್ವಜನಿಕರಿಗೆ ಬಸ್ ಸಂಚಾರ ಮತ್ತು ವಾಹನಗಳ ಸಂಚಾಲಕರಿಗೆ ಅನುಕೂಲವಾಗುತ್ತದೆ.

ಅದ್ದರಿಂದ ಈ ಪತ್ರ ದೊಂದಿಗೆ ಸ್ಥಳದ ನಕ್ಷೆಯನ್ನು ತಯಾರಿಸಿ ವೃತ್ತದ ಬಗ್ಗೆ ಪೂರ್ಣ ಚಿತ್ರಣವನ್ನು ಹಾಗೂ ವಿವರವನ್ನು ಸಲ್ಲಿಸಿದ್ದು, ನಂಜಪ್ಪ ವೃತ್ತದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳಲು ಮುಖ್ಯ ಅಭಿಯಂತರರು (ಯ.ವ) ರವರಿಗೆ ಸೂಕ್ತ ಆದೇಶ ನೀಡಬೇಕೆಂದು ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

K. Nandini

(ಕೆ.ನಂದಿನಿ ಶ್ರೀನಿವಾಸ)

ಬಿ.ಬಿ.ಎಂ.ಪಿ. ಆಯುಕ್ತರ ಆಪ್ತ ಕಾರ್ಯಾಲಯ
ಸಂಖ್ಯೆ ಪಿ.ಎಸ್.ಆರ್. (2) 1886/11
ದಿನಾಂಕ 02/9/2011

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಅಭಿಯಂತರರ ಕಛೇರಿ
1863
08 SEP 2011
ಸಂಖ್ಯೆ ಬೆಟ್ಟರಾಯನಪುರ ವಲಯ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ವಿಶೇಷ ಆಯುಕ್ತರು (ಯಲಹಂಕ)
ಸಂಖ್ಯೆ ಎಸ್.ಸಿ.ಬಿ.ಆರ್. 2347
ದಿನಾಂಕ 2/9/2011

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಜಂಟಿ ಆಯುಕ್ತರು
ಯಲಹಂಕ ವಲಯ
ಬೆಂಗಳೂರು-92

4353
7/9/11

This document was created with Win2PDF available at http://www.win2pdf.com.
The unregistered version of Win2PDF is for evaluation or non-commercial use only.
This page will not be added after purchasing Win2PDF.